
ಶ್ರೀ ಗುರುವಿಜಯದಾಸಾರ್ಯ

(ಶ್ರೀ ಶೇಷದಾಸಾರು)

ವಿರಚಿತ



ವಿರಾಟ ರೂಪ ಸುಳಾದಿ

ಸಂಗ್ರಹ : ಅರವಿಂದಲೋಚನ

ಧೃವತಾಳ

ಆಲಿಸಿ ಕೇಳುವುದು ಆದರದಿಂದಲಿ |
ಶ್ರೀ ಲಕುಮೀಶನ ಭಕುತರೆಲ್ಲ |
ಕಾಲ ದೇಶ ವ್ಯಾಪ್ತಳೆನಿಪಳಿಗಾದರು |
ಶೀಲ ಮೂರುತಿ ಇಂದ ಸುಖವೆಂಬೋದೋ |
ಕೇಳಿಬಲ್ಲದ್ದೆಸರಿ ಶ್ರುತಿ ಸ್ಮೃತಿ ಮುಖದಿಂದ |
ಆಲೋಚನೆ ಇದಕ್ಕಿಲ್ಲ ಎಣಿಸಿಗುಣಿಸು |
ಮೂಲಜೀವರ ಸುಖಕೆ ಶ್ರೀಪತಿ ಆದ ಬಳಿಕ |
ಹಲವು ಬಗೆಯಲಿ ಹರಿಯ ಸಂಪಾದಿಸಿಸು |
ಇಳಿಯೋಳು ವಾಜಿಪೇಯ ಪೌಂಡರಿಕಾದಿ ಯಜ್ಞ |
ನಿರ್ಮಲವಾದ ಧ್ಯಾನ ಜಪ ನೇಮವೋ |
ಜಾಲ ನಕ್ಷತ್ರ ಸಂಖ್ಯ ಮೀರಿದ ಮಹಾದಾನಾ |
ಕಾಲೋಚಿತವಾದ ಕರ್ಮ ಧ್ಯಾನ ಮೌನ |
ಜ್ವಾಲವಾದ ಕ್ರೂರ ತಪ ಹೋಮ ಸುರರರ್ಚನ |
ಸ್ಥೂಲ ಕರ್ಮಾಭಿಜಾತ ಪುಣ್ಯದಿಂದ |
ತ್ರಿಲೋಕಾಧಿಪತಿ ಸ್ಥಾನ ವೈದಿದ ನಂತರ |
ಇಳಿಯಬೇಕೊ ಧರಿಗೆ ಭೂಯೊಭೂಯೊ |
ಒಲಿಯನು ಇದಕ್ಕ ಜಲಜಾಯತೇಕ್ಷಣ |
ಒಲಿಸಬೇಕೆಂಬೋದು ಮನದಲ್ಲಿತ್ತೆ |
ಪೇಳಿದ ಮಾತಿನಲ್ಲಿ ಸಂದೇಹ ಮಾಡದಲೆ |
ಸುಲಭವಾದ ಪಥಪಿಡಿಯೊ ಬೇಗ |

ನೀಲಾಂಬುದ ಶ್ಯಮ ಗುರು ವಿಜಯ ವಿಠ್ಠಲರೇಯ |
ಪಾಲಿಸುವನು ಇದಕೆ ಶ್ರುತಿಯೆ ಸಾಕ್ಷಿ || ೧ ||

ಮಟ್ಟತಾಳ

ಪ್ರವೃತ್ತಿ ನಿವೃತ್ತಿ ಅಭಿಧಾನದಿ ಕರ್ಮ |
ದ್ವಿವಿಧವಾಗಿ ವುಂಟು ತಿಳಿವದು ಚೆನ್ನಾಗಿ |
ಪ್ರವೃತ್ತಿ ಕರ್ಮವನು ಸ್ವಪ್ನದಿ ಕಾಮಿಸದೆ |
ನಿವೃತ್ತಿ ಕರ್ಮದಲಿ ರತಿಉಳ್ಳವನಾಗಿ |
ದೇವ ಎನ್ನೊಳಗಿದ್ದು ಕಾಲಕರ್ಮಾನುಸಾರ |
ಆವಾವದು ಮಾಳ್ಪ ಮಾಡುವೆನದರಂತೆ |
ಆವ ಮಾಡಿಸದಿರಲು ನಾನ್ಯಾತಕೆ ಸಲ್ಲೆ |
ಕಾವಕೊಲ್ಲುವ ತಾನೆ ಅನ್ಯರು ಎನಗಿಲ್ಲ |
ಸರ್ವಾಧಿಷ್ಠಾನದಲಿ ಹರಿಯೆ ವ್ಯಾಪಿಸಿ ಇದ್ದು |
ಶರ್ವಾದಿಗಳಿಂದ ವ್ಯಾಪಾರವ ಗೈಸಿ |
ನಿರ್ವಾಹಕನಾಹ ಸ್ವತಂತ್ರ ತಾನಾಗಿ |
ಓರ್ವನಾದರು ಶ್ವಾಸ ಬಿಡುವ ಸೇದಿಕೊಂಬ |
ಗರ್ವಿಗಳಿಲ್ಲವೊ ಈ ಪೃಥ್ವಿಮಧ್ಯ |
ಈ ವಿಧದಲಿ ತಿಳಿದು ಜೀವರ ಲಕ್ಷಣ |
ಸಾವಧಾನದಿ ಗುಣಿಸು ಹರಿ ಕತೃತ್ವವನು |
ದೇವದೇವ ಬಿಂಬ, ಜೀವನೆ ಪ್ರತಿಬಿಂಬ |
ಭಾವಕೆಡದಂತೆ ಯೋಚಿಸು ಸರ್ವತ್ರ |

ಜೀವಭಿನ್ನಗುರು ವಿಜಯವಿಠ್ಠಲರೇಯ |
ಸೇವಕರಭಿಮಾನ ಯೆಂದೆಂದಿಗೆ ಬಿಡನು || ೨ ||

ತ್ರಿವಿದಿತಾಳ

ತನುವಿನೊಳಗೆ ಹೊರಗೆ ವಿಭಕ್ತ ಅವಿಭಕ್ತ |
ಅಣುಮಹದ್ರೂಪದಿ ಹರಿ ವಾಸವಕ್ಕು |
ವನಜ ಜಾಂಡಾಧಾರವಾಗಿಪ್ಪ ರೂಪವನ್ನು |
ಮನುಜರ ದೇಹಾಶ್ರಯ ವಾಗಿಪ್ಪದೊ |
ನೀನೊಲಿದು ಕೇಳುವದು ಇದನೇವೆ ಅವಿಭಕ್ತ |
ಘನರೂಪವೆಂಬೋರು ಜ್ಞಾನಿಗಳು |
ಮುನಿಗಳಮತವಿದು ಸಂದೇಹ ಬಡಸಲ್ಲ |
ಮನದಿ ಚಿಂತಿಸು ಈ ಶೂನ್ಯಾಭಿದನ ವ |
ದನದ ಮೇಲೆ ವದನ ಶ್ರೋತ್ರದ ಮೇಲೆ ಶ್ರೋತ್ರ ನ |
ಯನದ ಮೇಲೆ ನಯನ ಈ ಕ್ರಮದಿಂದಲಿ |
ತನು ಸಮಸ್ತದಲ್ಲಿ ಹರಿ ತನ್ನ ಅಂಗದಿಂದ |
ಅನುಸಾರವಾಗಿ ಆಶ್ರಯ ವಾಗಿಪ್ಪ |
ಕ್ಷೋಣಿವೊಳಗೆ ಈರೂಪ ಅನುಪೇಕ್ಷದಿಂದ |
ತನುವುನಿಲ್ಲದಯ್ಯಾ ವಿಧಿಗಾದರೂ |
ಇನಿತು ಸೊಬಗ ಪರಿಜ್ಞಾನರಹಿತಗಾಗಿ |
ವನಜ ಭವಾಂಡ ದಾನವಿತ್ತರೂನು |
ವನಜನಾಭಾನೊಮ್ಮೆ ದೃಷ್ಟಿಲಿ ನೋಡನಯ್ಯಾ |
ಅನುಮಾನ ಇದಕ್ಕಿಲ್ಲ ಶೃತ್ಯುಕ್ತವೊ |

ವಿನಯದಿಂದಲಿ ಇದು ಸ್ಮರಿಸಿದ ಜನರಿಗೆ |
ಜನುಮ ಜನುಮದ ಪಾಪ ಪ್ರಶಾಂತವೊ |
ಬಿನಗು ಮೈಲಿಗೆ ಯುಂತೆ ಸ್ಪೃಷ್ಟಾಸ್ಪೃಷ್ಟದಿಂದ |
ಅನುದಿನ ಪವಿತ್ರನು ಆಕೃತದಿಂದ |
ಋಣತ್ರಯದಿಂದಲಿ ಮುಕ್ತನಾಗಿ ಸತತ |
ದನುಜಾರಿ ಪುರವನ್ನೆ ಐದುವರೋಮಲಿನ |
ಮನುಜರ ಮನಸಿಗೆ ತೋರನೊಮ್ಮೆ |
ನೀನೆಗತಿಎಂದು ನಂಬಿದವರ |
ಮನಕೆ ಪೊಳೆವನು ಬಿಡದೆ ಮಾತರಿಶ್ವನ ದಯದಿ |
ಮನುಜಾ ತಿಳಿ ಇದನೆ ಭಕುತಿಇಂದ |
ಗುಣಗಣ ಪೂರ್ಣ ಗುರು ವಿಜಯ ವಿಠ್ಠಲರೇಯ |
ಜನನ ಮರಣಗಳಿಂದ ದೂರಮಾಳ್ಪ || ೩ ||

ಅಟ್ಟ ತಾಳ

ಈ ರೀತಿ ಇಂದಲಿ ದೇಹ ಧಾರಿಯ ರೂಪವ |
ಸಾರಿಸಾರಿಗೆ ತಿಳಿದು ಪೂಜಿಸು ಗುಪ್ತದಿ |
ಶಾರೀರ ಉಪಯೋಗವಾದ ವಿಷಯ ಜಾಲ |
ಹರಿಗೆ ಷೋಡಶ ಉಪಚಾರ ವೆಂದೆನ್ನು |
ಆರಾರು ಮಾಡುವ ವಂದನಾ ನಿಂದ್ಯೆಯು |
ಶ್ರೀರಮಣನಿಗಿದು ಬಲು ಸ್ತೋತ್ರವೆಂದೆನ್ನು |
ದಾರಾಪುತ್ರಾದಿ ಸಮಸ್ತ ಬಂಧುವರ್ಗ |
ಪರಿಚಾರಕರೆನ್ನು ಘನ ಮಹಾಮಹಿಮಂಗೆ |

ಮರೆವದೆಲ್ಲವು ಹರಿ ಮರವುದೆಂದೆನ್ನು |
ನಿರುತದಲಿ ಇದು ಮರೆಯದೆ ಮನದೊಳು |
ಕರಚರಣಾದಿಯಾವದ್ದವಯವ ಚೇಷ್ಟೆಯಾ |
ಗುರುಮುಖದಲಿ ತಿಳಿದು ಯಜ್ಞಕ್ರಮದಿಂದ |
ನೀರಜನಾಭನಿಗರ್ಪಿಸು ಅವದಾನ ಪೂರ್ವಕ |
ಮಾರಜನಕ ಗುರು ವಿಜಯ ವಿಠ್ಠಲರೇಯ |
ಕರವ ಪಿಡಿವನು ಇದನೇವೆ ಕೈಕೊಂಡು || ೪ ||

ಆದಿತಾಳ

ಬೊಮ್ಮಾಂಡದೊಳಗಿದ್ದ ಸ್ಥೂಲವಾದ ವಸ್ತುಗಳು |
ನಿಮ್ನವಾಗಿ ದೇಹದಲ್ಲಿ ಸೂಕ್ಷ್ಮವಾಗಿ ಉಂಟುಕೇಳು |
ಈಮ್ಮಹಾ ಲಕ್ಷಣದಿಂದಲೇ ಕ್ಷೇತ್ರವೆಂದು |
ಸನ್ಮಾನ್ಯವಾಗಿಪ್ಪದೊ ಜಡಗಳ ಮಧ್ಯದಲ್ಲಿ |
ಆ ಮಹಾ ಮಹಿಮನಾದ ಕ್ಷೇತ್ರಜ್ಞನನ್ನು ಭಜಿಸಿ |
ಜನ್ಮವ ನೀಗುವದು ಅವ್ಯವಧಾನದಿಂದ ವೈ |
ಷಮ್ಯರಹಿತ ಗುರು ವಿಜಯವಿಠ್ಠಲರೇಯ |
ಸಮ್ಮುಖನಾಗುವನು ಈಪರಿ ತಿಳಿದರೆ || ೫ ||

ಜತೆ

ಸಕಲ ಸಾಧನ ಮಧ್ಯ ಉತ್ಕೃಷ್ಟವೆನಿಪದು |
ನಖಶಿಖ ಪರಿಪೂರ್ಣ ಗುರುವಿಜಯ ವಿಠ್ಠಲ ವೊಲಿವ
|| ೬ ||